**P.W**-1

**<u>ದಿನಾಂಕ 10-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀವಿ ಸಿ ಕೆ ವಕೀಲರಿಂದಃ</u>**

1. ನನಗೆ ದಾನಪ್ಪ ತಂದೆ ಫಕ್ಕೀರಪ್ಪ ದೊಡ್ಡಮನಿ ಗೊತ್ತು. ಅವರ ವಿರುದ್ದ ಹಾಕಿದ ಪ್ರಕರಣ ಸಂಖ್ಯೆ ನನಗೆ ಗೊತ್ತಿಲ್ಲ. ಅದರ ಅಪರಾಧಿತ ಪ್ರಕರಣ ಸಂಖ್ಯೆಃ 761/2022 ಅಂತಾ ಇರುತ್ತದೆ ಎಂದರೆ ನಿಜ. ದಿಃ 10-01-2021 ರಂದು 1 ಲಕ್ಷ ಹಣ ಕೊಟ್ಟಿರುತ್ತೇನೆ ಅಂತಾ ಹೇಳಿ ಇದೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ನಿಜ. ಈಗ ನನಗೆ ಆ ಪ್ರಕರಣ ಪಿರ್ಯಾದಿ ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ್ದರಿಂದ ನಿಡಿ-1 ಎಂದು ಗುರುತಿಸಲಾಯ್ತು. ಆ ಪ್ರಕರಣಕ್ಕೆ ಸಂಬಂದಿಸಿದ ಚೆಕ್ಕನ್ನು ದೃಡೀಕಣ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯ್ತು.

2. ಯಾಕುಬ್ ತಂದೆ ನಿಸ್ಸಾರ್ ಅಹಮ್ಮದ್ ಜಮಾದರ ಗೊತ್ತು. ಆತನ ವಿರುದ್ದ ಕೂಡಾ ಇದೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು ಅದು ಸಿ ಸಿ ನಂ. 1234/2022 ನ್ನು ಅಂತಾ ಇರುತ್ತದೆ ಎಂದರೆ ನಿಜ. ಅವರಿಗೆ ದಿಃ 20-10-2021 ರಂದು 1,75,000/- ಹಣ ಕೊಟಿ ್ಟರುತ್ತೇನೆ ಎಂದು ತೋರಿಸಲಾಗಿದೆ ಎಂದರೆ ನಿಜ. ಈಗ ನನಗೆ ಆ ಪ್ರಕರಣ ಪಿರ್ಯಾದಿ ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ್ದರಿಂದ ನಿಡಿ-3 ಎಂದು ಗುರುತಿಸಲಾಯ್ತು. ಆ ಪ್ರಕರಣಕ್ಕೆ ಸಂಬಂದಿಸಿದ ಚೆಕ್ಕನ್ನು ದೃಡೀಕಣ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯ್ತು.

3. ಸುನೀಲ್ ತಂದೆ ರಮೇಶ ಗಣಾಚಾರಿ ನನಗೆ ಗೊತ್ತು. ಅವರ ವಿರುದ್ಧ ಪ್ರಕರಣ ದಾಖಲಾಗಿದ್ದು ಅವರ ವಿರುದ್ಧ ಸಿ ಸಿ ನಂಃ 1287/2022 ದಾಖಲಕಿಸಿರುತ್ತೇನೆ ಎಂದರೆ ನಿಜ. ಅದರಲ್ಲಿ ದಿಃ 21-08-2021 2,50,000/- ಹಣ ಕೊಟ್ಟಿದೆ ಎಂದು ತೋರಿಸಲಾಗಿದೆ ಎಂದರೆ ನಿಜ. ಆ ಪ್ರಕರಣ ಕೂಡಾ ಈಗ ಚಾಲ್ತಿಯಲ್ಲಿ ಇದೆ ಎಂದರೆ ನಿಜ. ಈಗ ನನಗೆ ಆ ಪ್ರಕರಣ ಪಿರ್ಯಾದಿ ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ್ದರಿಂದ ನಿಡಿ-5 ಎಂದು ಗುರುತಿಸಲಾಯ್ತು. ಆ ಪ್ರಕರಣಕ್ಕೆ ಸಂಬಂದಿಸಿದ ಚೆಕ್ಕನ್ನು ದೃಡೀಕಣ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-6 ಎಂದು ಗುರುತಿಸಲಾಯ್ತು.

4. ಯಾಕುಬ್ ತಂದೆ ನೀಸ್ಸಾರ್ ಅಹ್ಮಮದ್ ಜಮಾದರ ನನಗೆ ಗೊತ್ತು. ಅವರ ವಿರುದ್ಧ ಪ್ರಕರಣ ದಾಖಲಾಗಿದ್ದು ಅವರ ವಿರುದ್ಧ ಸಿ ಸಿ ನಂಃ 1235/2022 ದಾಖಲಕಿಸಿರುತ್ತೇನೆ ಎಂದರೆ ನಿಜ. ಅದರಲ್ಲಿ ದಿಃ 15-12-2021 1,50,000/- ಹಣ ಕೊಟ್ಟಿದೆ ಎಂದು ತೋರಿಸಲಾಗಿದೆ ಎಂದರೆ ನಿಜ. ಆ ಪ್ರಕರಣ ಕೂಡಾ ಈಗ ಚಾಲ್ತಿಯಲ್ಲಿ ಇದೆ ಎಂದರೆ ನಿಜ. ಈಗ ನನಗೆ ಆ ಪ್ರಕರಣ ಪಿರ್ಯಾದಿ ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ್ದರಿಂದ ನಿಡಿ-7 ಎಂದು ಗುರುತಿಸಲಾಯ್ತು. ಆ ಪ್ರಕರಣಕ್ಕೆ ಸಂಬಂದಿಸಿದ ಚೆಕ್ಕನ್ನು ದೃಡೀಕಣ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-8 ಎಂದು ಗುರುತಿಸಲಾಯ್ತು.

5. ದಾನಪ್ಪ ತಂದೆ ಪಕ್ಕಿರಪ್ಪ ದೊಡ್ಡಮನಿ ನನಗೆ ಗೊತ್ತು. ಅವರ ವಿರುದ್ಧ ಪ್ರಕರಣ ದಾಖಲಾಗಿದ್ದು ಅವರ ವಿರುದ್ಧ ಸಿ ಸಿ ನಂಃ 1489/2022 ದಾಖಲಕಿಸಿರುತ್ತೇನೆ ಎಂದರೆ ನಿಜ.

ಅದರಲ್ಲಿ ದಿಃ 20-12-2020 2,00,000/- ಹಣ ಕೊಟ್ಟಿದೆ ಎಂದು ತೋರಿಸಲಾಗಿದೆ ಎಂದರೆ ನಿಜ. ಆ ಪ್ರಕರಣ ಕೂಡಾ ಈಗ ಚಾಲ್ತಿಯಲ್ಲಿ ಇದೆ ಎಂದರೆ ನಿಜ. ಈಗ ನನಗೆ ಆ ಪ್ರಕರಣ ಫಿರ್ಯಾದಿ ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ್ದರಿಂದ ನಿಡಿ-9 ಎಂದು ಗುರುತಿಸಲಾಯ್ತು. ಆ ಪ್ರಕರಣಕ್ಕೆ ಸಂಬಂದಿಸಿದ ಚೆಕ್ಕನ್ನು ದೃಡೀಕಣ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-10 ಎಂದು ಗುರುತಿಸಲಾಯ್ತು. ಈ ಪ್ರಕಣವಲ್ಲದೆ ಇನ್ನು ಹಲವಾರು ಪ್ರಕರಣಗಳು ದಾಖಲಿಸಿದ್ದೇನೆ ಎಂದರೆ ನಿಜ. ನಾನು 2021 ರಲ್ಲಿ ಅಂದಾಜು 25 ಲಕ್ಷಕ್ಕಿಂತ ಹೆಚ್ಚಿಗೆ ಹಣ ಕೊಟ್ಟಿದ್ದೇನೆ ಎಂದು ತೋರಿಸಲಾಗಿದೆ ಎಂದರೆ ನಿಜ. ಅದೇ ರೀತಿ ಈ ಪ್ರಕರಣದಲ್ಲಿ 3 ಲಕ್ಷ ಹಣಕ್ಕೆ ಆರೋಪಿತನ ವಿರುದ್ದ ಪ್ರಕರಣ ಸಲ್ಲಿಸಲಾಗಿದೆ ಎಂದರೆ ನಿಜ. ಎಲ್ಲ ಪ್ರಕರಣಗಳ ಚೆಕ್ಕಿನಲ್ಲಿ ಬರೆದ ಅಂಕಿ ಮತ್ತು ಅಕ್ಷರಗಳು ಒಂದೇ ರೀತಿಯಾಗಿವೆ ಎಂದರೆ ಸರಿಯಲ್ಲ.

6. ಸದರಿ ಈ ಎಲ್ಲ ಪ್ರಕರಣಗಳಿಗೆ ಸಂಬಂದಿಸಿದಂತೆ ನನ್ನ ಬಳಿ ನಗದು ಹಣ ಇತ್ತು . ಅದು ಅಂದಾಜು 25 ಲಕ್ಷ ಹಣ ಇತ್ತು. ಸದರಿ ಹಣವನ್ನು ನನ್ನ ಮನೆಯಲ್ಲಿ ಇಟ್ಟು ಕೊಳ್ಳಲು ಕಾರಣ ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೆ ಕಾರಣ ಹಣವನ್ನು ಇಟ್ಟು ಕೊಂಡಿದ್ದೆ. ನಾನು 2021 ರಲ್ಲಿ ರಾಣೆಬೆನ್ನೂರಿನಲ್ಲಿ ಒಂದು ಬ್ಯಾಂಕಿನಲ್ಲಿ ಖಾತೆ ಹೊಂದಿದ್ದು ಅದು ಕೆವಿಜಿ ಬ್ಯಾಕಿನಲ್ಲಿ ಹೊಂದಿದ್ದೆ. ಅದರ ಖಾತೆ ಸಂಖ್ಯೆ ಹೇಳಲು ಬರುವುದಿಲ್ಲ. 2021 ರಲ್ಲಿ ಆ ಖಾತೆಯಲ್ಲಿ 10 ರಿಂದ 12 ಲಕ್ಷ ಹಣ ಇರಬಹುದು. ನಾನು ವಾರ್ಷಿಕ ಆದಾಯ ರಿಟನ್ಸನಲ್ಲಿ ಹಣ ಕೊಟ್ಟ ಬಗ್ಗೆ ತೋರಿಸಿಲ್ಲ. ಸದರಿ ನನ್ನ ಬ್ಯಾಂಕಿನ ಖಾತೆಯಲ್ಲಿ 12 ಲಕ್ಷ ಇದ್ದ ಬಗ್ಗೆ ತೊರಿಸಿಲ್ಲ. ಆ ರೀತಿಯಾಗಿ ತೋರಿಸಲಿಕ್ಕೆ

ನನಗೆ ಯಾವುದೇ ತೊಂದರೆ ಇದ್ದಿರಲಿಲ್ಲ.

7. ನಾನು ಕಾನೂನು ಬಾಹಿರವಾಗಿ ವ್ಯವಹಾರ ಮಾಡುತ್ತಿದ್ದರಿಂದ ಆ ರೀತಿಯಾಗಿ ತೋರಿಸಿಲ್ಲ ಎಂದರೆ ಸರಿಯಲ್ಲ. ಇಷ್ಟು ಜನರಿಗೆ ಹಣ ಕೊಡಲು ಉದ್ದೇಶ ಹೇಳಲು ಬರುವುದಿಲ್ಲ. ಹಣದ ಅಡಚಣೆ ಇರುವುದರಿಂದ ಕೈಗಡ ಸಾಲ ಕೊಟ್ಟಿರುತ್ತೇನೆ. ತೋಂದರೆ ಗೊಸ್ಕರ ಮಾತ್ರ ಕೊಟ್ಟಿರುತ್ತೇನೆ ಬೇರೆ ಉದ್ದೇಶ ಇರಲಿಲ್ಲ. ಈ ಎಲ್ಲ ಪ್ರಕರಣಗಳಿಗೆ ಸಂಬಂದಿಸಿದಂತೆ ಕೇವಲ ಚೆಕ್ಕನ್ನು ಮಾತ್ರ ಪಡೆದಿದ್ದು ಬೇರೆ ದಾಖಲೆಗಳನ್ನು ಪಡೆದಿಲ್ಲ. ನಾನು ಸಹಿ ಮಾಡಿದ ಖಾಲಿ ಚೆಕ್ಕಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಹಣ ಕೊಟ್ಟ ತಕ್ಷಣ ಚೆಕ್ಕು ಕೊಟ್ಟಿಲ್ಲ. ಹಣ ಕೇಳಲು ಹೋದಾಗ ಚೆಕ್ಕು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಾನು ಆರೊಪಿತನ ಕಡೆಯಿಂದ ಶೇಕಡಾ 10 ರಷ್ಟು ಬಡ್ಡಿ ಪಡೆದು ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಣ ಕೊಡಬೇಕಾದರೆ ಒಂದು ಡೈರಿಯನ್ನು ಹೊಂದಿರುತ್ತಿದ್ದೆ ಎಂದರೆ ನಿಜ. ಸದರಿ ಆರೋಪಿತನಿಗೆ ಹಣಕೊಟ್ಟ ಬಗ್ಗೆ ತೋರಿಸಲು ಡೈರಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ.

**ಸಾಕ್ಷಿ ತನ್ನ ಕೈಯಲ್ಲಿ ಬರೆದುಕೊಂಡು ಬಂದಿದ್ದು ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.)**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫಸಿ, ರಾಣೆಬೆನ್ನೂರ.**

**ಸಾಕ್ಷಿದಾರರ ಸಹಿಃ**